

ಸದಸ್ಯರಿಗೆ ತಿಳಿಯಿತು. ಮೂರನೇ ತಿಂಗಳ ಹೊತ್ತಿಗೆ ನಮ್ಮ ಬಳಗದ ಸಂಖ್ಯೆ 70 ಮುಟ್ಟಿತ್ತು.'

'ನಾವು ಸಭೆ ಸೇರುವ ಸಮಯಕ್ಕೆ ಬ್ಯಾಂಕ್ ವ್ಯವಸ್ಥಾಪಕರು ಬರುತ್ತಿದ್ದರು. ನಮ್ಮಿಂದ ಪ್ರತಿ ತಿಂಗಳು ಹಣ ಪಡೆದು ರೈತಕೂಟದ ಹೆಸರಿನಲ್ಲಿ ಒಂದು ವರ್ಷದ ಅವಧಿಗೆ ಠೇವಣಿ ಮಾಡುತ್ತಿದ್ದರು. ಯಾರೊಬ್ಬರೂ ತಡ ಮಾಡದೆ ತಿಂಗಳ 5 ತಾರೀಖಿನಂದು ಹಣ ಸೇರಿಸುತ್ತಿದ್ದರು. ಒಂದು ವರ್ಷ ಕಳೆದದ್ದೇ ತಿಳಿಯಲಿಲ್ಲ. ಕೆಲವು ಪ್ರವಾಸಿ ಸಂಸ್ಥೆಗಳನ್ನು ಸಂಪರ್ಕಿಸಿದೆವು. ನಮ್ಮ ಸಂಖ್ಯೆಯನ್ನು ಕಂಡು ನಮ್ಮ ಊರಿಗೇ ಅವರು ಬಂದರು. ಅವರು ತೋರಿಸುವ ದೇಶಗಳು, ಸ್ಥಳಗಳು, ಹಣದ ಮಾಹಿತಿ ಕೊಟ್ಟರು. ಸಿಂಗಪುರ, ಶ್ರೀಲಂಕಾ ಮತ್ತು ಥಾಯ್ಲೆಂಡ್ ದೇಶಗಳನ್ನು ನೋಡಿ ಬರಲು ತೀರ್ಮಾನಿಸಿದೆವು. ನಮಗೆಲ್ಲರಿಗೂ ಸಮಾಧಾನವಾದ ಪ್ರವಾಸಿ ಸಂಸ್ಥೆಗೆ ಮೂರು ಕಂತುಗಳಲ್ಲಿ ಹಣ ನೀಡಿದೆವು.'

'ನಮ್ಮಲ್ಲಿ ಬಹುತೇಕರದ್ದು ಮೊದಲನೇ ವಿದೇಶ ಪ್ರವಾಸವಾದದರಿಂದ ಮೊದಲಿಗೆ ಪಾಸ್‌ಪೋರ್ಟ್ ಇಲ್ಲದವರ ಪಾಸ್‌ಪೋರ್ಟ್ ಮಾಡಿಸಿದೆವು. ಎಲ್ಲರೂ ರೈತರೇ ಹೋಗುತ್ತಿರುವುದರಿಂದ ಆ ದೇಶಗಳಲ್ಲಿ ಉತ್ತಮ ಕೃಷಿಕರನ್ನು ಭೇಟಿ ಮಾಡುವುದು, ಅಲ್ಲಿನ ಕೃಷಿ ಪದ್ಧತಿ, ಮಾರುಕಟ್ಟೆ ವ್ಯವಸ್ಥೆ ಮುಂತಾದವುಗಳನ್ನು ನೋಡಿ ತಿಳಿಯುವುದು ಸಹ ನಮ್ಮ ಪ್ರವಾಸದ ಪಟ್ಟಿಯಲ್ಲಿರಬೇಕೆಂದೆವು. ನಮ್ಮಲ್ಲಿ ಬಹುಮಂದಿಗೆ ಇಂಗ್ಲಿಷ್ ಬರುವುದಿಲ್ಲ. ಮೊದಲ ಬಾರಿಗೆ ಏರೋಪ್ಲೇನ್ ಪ್ರಯಾಣ, ಯಾವುದೇ ರೀತಿಯ ತೊಂದರೆಯಾಗಬಾರದೆಂದು ಷರತ್ತು ವಿಧಿಸಿದೆವು. 65 ವರ್ಷ ಮೇಲ್ಪಟ್ಟವರೂ ಕೆಲವರಿದ್ದರು. ಎಲ್ಲರಿಗೂ ವಿಮೆ ಮಾಡಿಸಿದೆವು. ವಿಮಾನದಲ್ಲಿ ನಾವುಗಳು ಕೂರುವ ಆಸನದ ಮೇಲೆ 'ಕರ್ನಾಟಕ ಫಾರ್ಮರ್ಸ್ ಕ್ಲಬ್ ಮೆಂಬರ್ಸ್, ಚಿಕ್ಕಬಳ್ಳಾಪುರ' ಎಂಬ ಪಟ್ಟಿಯನ್ನು ಹಾಕಿದ್ದುದು ರೈತರಿಗೆ ವಿಮಾನ ಸಂಸ್ಥೆ ಸಲ್ಲಿಸಿದ ಗೌರವ. ಎಲ್ಲ ಸುಸೂತ್ರವಾಗಿ ನಡೆಯಿತು.'

'ಪರಿಸರವನ್ನೇ ಪ್ರಧಾನವಾಗಿರಿಸಿಕೊಂಡ ಪರ್ಮನೆಂಟ್ ಅಗ್ರಿಕಲ್ಚರ್ ಬಗ್ಗೆ ತಿಳಿದೆವು. ಅಲ್ಲಿನ ಬಾಸುಮತಿ ಭತ್ತ ಬೆಳೆದ ನೂರಾರು ಎಕರೆ ಗದ್ದೆಯನ್ನು ನೋಡಿದೆವು. ಆಧುನಿಕ ಕೃಷಿ ಪದ್ಧತಿ ಮತ್ತು ಮಾರುಕಟ್ಟೆಯ ಬಗ್ಗೆ ಅರಿತೆವು. ಒಟ್ಟಾರೆ ವಿದೇಶ ಪ್ರವಾಸದಿಂದ ರೈತರ ಆಲೋಚನೆ, ದೃಷ್ಟಿಕೋನ ಬದಲಾಯಿತು. ಒಬ್ಬ ಸಣ್ಣ ರೈತ ಕೂಡ ವಿದೇಶ ಪ್ರವಾಸ ಮಾಡಿಬರಬಹುದೆಂದು ತೋರಿಸಿಕೊಟ್ಟೆವು'. ಹೀಗೆ ರೈತರನ್ನು ಕಟ್ಟಿಕೊಂಡು ವಿದೇಶ ಪ್ರವಾಸ ಹೋಗಿ ಬಂದ ಬಗ್ಗೆ ಮಾತನಾಡುವಾಗ ಗೋಪಾಲಗೌಡರ ಧ್ವನಿಯಲ್ಲಿ ಉತ್ಸಾಹ ತುಳುಕುತ್ತದೆ.

## ವಿದೇಶ ಪ್ರವಾಸ ಹೊರೆಯಲ್ಲ

ಕೆಲವು ವರ್ಷಗಳ ಹಿಂದಷ್ಟೇ ಯಾರಾದರೂ ವಿದೇಶಕ್ಕೆ ಹೊರಟಿದ್ದಾರೆಂದರೆ – 'ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ?' ಎಂದು ಕೇಳುತ್ತಿದ್ದರು. ವಿದೇಶಗಳಲ್ಲೂ ತಮ್ಮ ಚಟುವಟಿಕೆಗಳನ್ನುಳ್ಳ ಕಂಪನಿಯವರು ಕೆಲಸದ ನಿಮಿತ್ತ ತಮ್ಮ ನೌಕರರನ್ನು ವಿದೇಶಕ್ಕೆ ಕಳುಹಿಸುವುದು ಸರಿಯಷ್ಟೇ. ಹಾಗಾಗಿ, ವಿದೇಶಕ್ಕೆ ಹೋಗುವುದು ಎಂದರೆ ಸಂಸ್ಥೆಗಳ ಕಾರ್ಯನಿಮಿತ್ತ ಎನ್ನುವುದು ಬಹುತೇಕರ ಅಭಿಪ್ರಾಯವಾಗಿತ್ತು. ಹೆಚ್ಚು ಹಣವಿರುವವರು ಮಾತ್ರ ವಿದೇಶ ಪ್ರವಾಸ ಮಾಡುತ್ತಾರೆ ಎಂಬ ಭಾವನೆ ಜನರಲ್ಲಿತ್ತು. ಈಗ ಕಾಲ ಬದಲಾಗಿದೆ. ವಿದೇಶ ಪ್ರವಾಸ ಎನ್ನುವುದು ಆರ್ಥಿಕವಾಗಿ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿಲ್ಲ. ಸರಿಯಾಗಿ ಸಿದ್ಧತೆ ನಡೆಸಿದರೆ, ಜನಸಾಮಾನ್ಯರು ಕೂಡ ವಿದೇಶಕ್ಕೆ ಹೋಗಿಬರುವುದು ಈಗ ದುಬಾರಿ ಬಾಬತ್ತಾಗಿ ಉಳಿದಿಲ್ಲ.

